(ಸಾಕ್ಷಿಯನ್ನು ದಿಃ 3-3-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದಃ ವಾದಿ ಪರವಾಗಿಃ**

ನಾನು ಸರ್ವೆ ಕಚೇರಿಯಲ್ಲಿ 29 ವರ್ಷಗಳ ಕಾಲ ಪ್ರ.ದ.ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಕಾರವಾರದಲ್ಲಿ 1993 ರಿಂದ 2010 ರ ತನಕ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೂಲ ಮಾಲೀಕರು ಅನಂತ ಕೃಷ್ಣಾ ಶೇಟ್ ಆಗಿದ್ದರು. ನಮ್ಮ ಕುಟುಂಬದವರು ದಾವಾ ಆಸ್ತಿಯನ್ನು ರೈತಾಪಿ ನಾತೆಯಿಂದ ಸಾಗುವಳಿ ಮಾಡುತ್ತಿದ್ದೇವು ಎಂದರೆ ನಿಜ. ವಾದಿಯು ದಾವಾ ಆಸ್ತಿಯನ್ನು ಸಾದಾ ರೈತರಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆದರೆ ದಾವಾ ಆಸ್ತಿಯನ್ನು ವಾದಿಯು ಖರೀದಿ ಮಾಡಿದ್ದರು. ಈ ಬಗ್ಗೆ ನಾನು ನಿಡಿ-3 ರಂತೆ ಕ್ರಯ ಪತ್ರ ಹಾಜರು ಪಡಿಸಿದ್ದೇನೆ ಎಂದರೆ ನಿಜ. ಸದರಿ ಕ್ರಯ ಪತ್ರವನ್ನು ನಾನು ಓದಿ ನೋಡಿದ್ದೇನೆ ಎಂದರೆ ನಿಜ. ನಿಡಿ-3 ರ ಕ್ರಯ ಪತ್ರದಲ್ಲಿ ವಾದಿಯನ್ನು ದಾವಾ ಆಸ್ತಿಯ ಸಾದಾ ರೈತ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡುವ ಮುಂಚೆಯೇ ಸಾದಾ ರೈತ ನಾತೆಯಿಂದ ದಾವಾ ಆಸ್ತಿಯಲ್ಲಿ ಸ್ವಾಧಿನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ನಿಡಿ-3 ರ ಕ್ರಯ ಪತ್ರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿಯು ತಹಶೀಲ್ದಾರವರಿಂದ ಅನುಮತಿಯನ್ನು ಪಡೆದು ದಾವಾ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ನಿಜ.

ಖರೀದಿ ಪತ್ರದ ಪ್ರಕಾರ ವಾದಿಯ ಹೆಸರಿಗೆ ಎಮ್ ಇ ನಂ. ಎ2960 ಪ್ರಕಾರ 16 ಗುಂಟೆಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಆದರೆ 8 ಗುಂಟೆಗೆ ಮಾತ್ರ ಖಾತೆಯಾಗಿರುತ್ತದೆ. ನಿಪಿ-6 ರ ಪ್ರಕಾರ ಎಮ್ ಇ ನಂ. ಎ5909 ರಂತೆ ಅನಂತ ಪುರುಸಪ್ಪ ನಾಯ್ಕ, ಲಾಡು ಪುರಸಪ್ಪ ನಾಯ್ಕ, ಗೋವಿಂದ ಲಾಡು ನಾಯ್ಕ, ಈರಪ್ಪ ಪುರಸಪ್ಪ ನಾಯ್ಕ ಮತ್ತು ಕೇಶವ ಶಾಂತಾರಾಮ ಮದನ ರವರ ಹೆಸರಿಗೆ ಒಂದು ಎಕರೆ 8 ಗುಂಟೆ ಮತ್ತು 3 ಗುಂಟೆಯನ್ನು ಅವರ ಹೆಸರಿಗೆ ಮಾಡಲಾಗಿದೆ ಎಂದರೆ ನಿಜ.

ನಾನು ಎಲ್ಲ ಪ್ರತಿವಾದಿಗಳ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ನಿಪಿ-7 ರ ಪ್ರಕಾರ ಎಮ್ ಇ ನಂ. ಎ6810 ರಂತೆ ಈರಪ್ಪ ಪುರಸಪ್ಪ ನಾಯ್ಕ ರವರಿಗೆ 5 ಗುಂಟೆ 4 ಆಣೆ ಮತ್ತು

10 ಗುಂಟೆ ಹಾಗೂ ಗೋವಿಂದ ಲಾಡು ನಾಯ್ಕ ರವರಿಗೆ 15 ಗುಂಟೆ 4 ಆಣೆ ಹಾಗೂ ಮಹಾದೇವ, ಗಣಪತಿ, ಮನೋಹರ ಮತ್ತು ಸತೀಶ ರವರಿಗೆ 15 ಗುಂಟೆ 4 ಆಣೆ ಜಮೀನು ಖಾತೆಯಾಗಿದೆ ಎಂದರೆ ನಿಜ. ಅವುಗಳ ಒಟ್ಟೂ ಕ್ಷೇತ್ರ ಒಂದು ಎಕರೆ 20 ಗುಂಟೆ ಇರುತ್ತದೆ ಎಂದರೆ ನಿಜ. ನಮಗೆ ಭೂ ನ್ಯಾಯ ಮಂಡಳಿಯವರು ಒಂದು ಎಕರೆ 11 ಗುಂಟೆ ಮಾತ್ರ ಮಂಜೂರಾತಿ ಮಾಡಿದ್ದರು ಎಂದರೆ ನಿಜ. ನಮ್ಮ ದಾಖಲಾತಿಗಳಲ್ಲಿ 20 ಗುಂಟೆ ಹೆಚ್ಚಿಗೆ ಜಮೀನನ್ನು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲು ಸರ್ವೆ ಇಲಾಖೆ ಮತ್ತು ಕಂದಾಯ ಇಲಾಖೆ ಒಂದೇ ಆಗಿದ್ದವು ಎಂದರೆ ನಿಜ. ಸದರಿ 20 ಗುಂಟೆ ಹೆಚ್ಚಾಗಿ ಹೇಗೆ ಮತ್ತು ಯಾವ ರೀತಿ ಬಂತು ಎಂದರೆ ಸಾಕ್ಷಿಯು ನಾವು ಹೆಚ್ಚಾಗಿ ಬರೆಸಿಕೊಂಡಿಯೇ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ-7ರ ಪ್ರಕಾರ 20 ಗುಂಟೆ ಜಮೀನನ್ನು ಹೆಚ್ಚಾಗಿ ತೋರಿಸಿಲ್ಲ. ನಮಗೆ ಒಟ್ಟೂ ಎಷ್ಟು ಎಕರೆ ಜಮೀನು ಇದೆ ಎಂದು ಗೊತ್ತಿಲ್ಲ. ನಮಗೆ ಒಂದು ಎಕರೆ 11 ಗುಂಟೆಯಲ್ಲಿ ಮಾತ್ರ ಹಕ್ಕು ಇದೆ ಎಂದರೆ ನಿಜ.

ಸರ್ವೆ ಇಲಾಖೆಯಲ್ಲಿ ನಮೂನೆ 4 ಎಂಬ ದಾಖಲಾತಿ ಇರುತ್ತದೆ ಎಂದರೆ ನಿಜ. ಅದೇ ರೀತಿ ಸರ್ವೆ ಇಲಾಖೆಯಲ್ಲಿ ಹಿಸ್ಸಾ ನಮೂನೆ 1 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಜಮೀನು ಭೂ ಪರಿವರ್ತನೆ ಆದ ನಂತರ ಕಮ್ಮಿ ಜಾಸ್ತಿ ಪತ್ರಿಕೆ ಆಗುತ್ತದೆ ಎಂದರೆ ನಿಜ. ಸರ್ವೆನಂ. 231 ಅ 1 ಅ 1 ಡ ಈ ಜಮೀನು ನನಗೆ ಸೇರಿದೆ ಎಂದರೆ ನಿಜ. ಸದರಿ ಜಮೀನಿಗೆ ಕೆಜೆಪಿ ಮತ್ತು ಪಿಟಿ ಶೀಟ್ ಇಲ್ಲವೆಂದು ಸರ್ವೆ ಇಲಾಖೆಯವರು ನಿಪಿ-10ರಂತೆ ಒಂದು ಹಿಂಬರಹವನ್ನು ಕೊಟ್ಟಿದ್ದಾರೆ ಎಂದರೆ ಇರಬಹುದು. ನಿಪಿ-2ರ ದಾಖಲಾತಿಯು ನಕಾಶೆಯಾಗಿದ್ದು ಅದು ಇಡೀ ಕ್ಷೇತ್ರಕ್ಕೆ ಇರುತ್ತದೆ ಎಂದರೆ ನಿಜ. ಸದರಿ ನಿಪಿ-2ರಲ್ಲಿ ತೋರಿಸಿರುವ ಜಮೀನು ಈ ಮೊದಲು ಅನಂತ ಕೃಷ್ಣಪ್ಪ ಶೇಟ್ ವೆರ್ಣೇಕರ ರವರಿಗೆ ಸೇರಿತ್ತು ಎಂದರೆ ನಿಜ. ಸದರಿ ಅನಂತ ಕೃಷ್ಣಾ ಶೇಟ್ ವೆರ್ಣೆಕರರವರು ತಮ್ಮ ಜಮೀನನ್ನು ರೈತರಿಗೆ ಉಳುಮೆ ಮಾಡಲು ಕೊಟ್ಟಿದ್ದರು ಎಂದರೆ ನಿಜ. ಸದರಿ ಅನಂತ ಕೃಷ್ಣಪ್ಪ ಶೇಟ್ ವೆರ್ಣೇಕರರವರು ರೈತರಿಗೆ ಉಳುಮೆ ಮಾಡಲು ಕೊಡುವಾಗ ಹಿಸ್ಸೆ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಹಿಸ್ಸೆ ಆದ ಬಗ್ಗೆ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಮ್ಮ ಹತ್ತಿರ ಸದರಿ ದಾಖಲಾತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಜಮೀನು ಇಲ್ಲಿಯ ತನಕ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ದಾಖಲಾತಿಯು ವಾದಿ ಮತ್ತು ಪ್ರತಿವಾದಿಗಳ ಜಮೀನುಗಳಿಗೆ ಸಂಬಂದಪಟ್ಟಂತೆ ತಯಾರಿಸಿರುವ ನಕಾಶೆಯಾಗಿರುತ್ತದೆ

ಎಂದರೆ ನಿಜ. ಸದರಿ ನಿಪಿ-3 ರ ನಕಾಶೆಯನ್ನು ಇಲಾಖೆಯವರು ಮಾಡಿರುತ್ತಾರೆ. ನಿಪಿ-3 ರ ನಕಾಶೆಯನ್ನು ನಾನು ಅರ್ಜಿ ಕೊಟ್ಟ ಮೇರೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರ ನಕಾಶೆಯನ್ನು ಭೂ ಪರಿವರ್ತನೆ ಆದ ನಂತರ ತಯಾರಿಸಲಾಗಿದೆ ಎಂದರೆ ನಿಜ.

ನಾನು ಕಂಪೌಂಡ್ ವಾಲನ್ನು ಕಟ್ಟಲು ನಿಪಿ-8 ರಂತೆ ಕಟ್ಟಡ ಪರವಾನಿಗೆ ಪಡೆದಿರುತ್ತೇನೆ ಎಂದರೆ ನಿಜ. ನಾನು ನಿಪಿ-8 ರ ಪರವಾನಿಗೆಯನ್ನು ಎಷ್ಟು ಕ್ಷೇತ್ರ ಕಟ್ಟಲು ಪಡೆದುಕೊಂಡಿದ್ದೆ ಎಂದು ನನಗೆ ನೆನಪಿಲ್ಲ. ನಿಪಿ-8 ಮತ್ತು 9 ರ ದಾಖಲಾತಿಗಳನ್ನು ನೋಡಿ ನಾನು ಎಷ್ಟು ಕ್ಷೇತ್ರದಲ್ಲಿ ಕಂಪೌಂಡ್ ವಾಲ್  ಕಟ್ಟಲು ಅನುಮತಿ ಪಡೆದಿದ್ದೆ ಎಂದು ನನಗೆ ಗೊತ್ತಿಲ್ಲ. ನಾನು ನಗರಸಭೆ ಮತ್ತು ಕೆಡಿಎ ಕಚೇರಿಗೆ ಪಿಟಿ ಶೀಟನ್ನು ಹಾಜರು ಪಡಿಸಿರುತ್ತೇನೆ. ಸದರಿ ಪಿಟಿ ಶೀಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಈಗ ಅದು ನಮ್ಮ ಹತ್ತಿರ ಇಲ್ಲವೆಂದು ನುಡಿದಿರುತ್ತಾರೆ. ನಾನು ಪಿಟಿ ಶೀಟನ್ನು ಸರ್ವೆ ಇಲಾಖೆಯಿಂದ ಪಡೆದುಕೊಂಡಿದ್ದೇನು. ನಾನು ಸರ್ವೆ ಇಲಾಖೆಗೆ ಅರ್ಜಿ ಕೊಟ್ಟು ಪಿಟಿ ಶೀಟನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ನಿಜ. ಯಾವುದೇ ಪಿಟಿ ಶೀಟ್ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.